

بِسۡمِ اللّٰہِ الرَّحۡمٰنِ الرَّحِیۡمِ

# ಕೆನಡ ಪ್ರವಾಸ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನಿನ **'ಬೈತುಲ್ ಫುತೂಹ್'** ಮಸೀದಿಯಲ್ಲಿ **18-11-2016** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಹೀಗೆ ಹೇಳಿದರು:*

ನಿಮಗೆ ತಿಳಿದಿರುವ ಹಾಗೆ ನಾನು ಕಳೆದ ಕೆಲವು ದಿನಗಳಲ್ಲಿ ಕೆನಡದ ಪ್ರವಾಸದಲ್ಲಿದ್ದೆ. ಅಂದಾಜು ಆರು ವಾರಗಳ ಕಾರ್ಯಕ್ರಮವಿತ್ತು. ಅಲ್ಲಾಹನ ಅನುಗ್ರಹದಿಂದ ಈ ಪ್ರವಾಸ ಬಹಳ ಅನುಗ್ರಹಕರವಾಗಿತ್ತು. ಜಮಾಅತ್ ಕಾರ್ಯಕ್ರಮದಲ್ಲಿಯೂ ಅನ್ಯರೊಂದಿಗೆ ಜರಗಿದ ಕಾರ್ಯಕ್ರಮಗಳಲ್ಲಿಯೂ ಇದು ಕಾಣಿಸಿತು. ಜಲ್ಸಕ್ಕೆ ಸಂಬಂಧಿಸಿ ಜನರ ಅಭಿಪ್ರಾಯಗಳನ್ನು, ಜಲ್ಸದ ವ್ಯವಸ್ಥೆಗೆ ಸಂಬಂಧಿಸಿದ ವಿಷಯಗಳನ್ನು ಮತ್ತು ಅಲ್ಲಾಹನಿಗೆ ಕೃತಜ್ಞತೆ ಅರ್ಪಿಸುವ ಬಗ್ಗೆ ನಾನು ಜಲ್ಸ ಕಳೆದ ನಂತರದ ಖುತ್‌ಬದಲ್ಲಿ ಪ್ರಸ್ತಾಪಿಸಿದ್ದೆ. ಇಂದು ನಾನು ಬೇರೆ ಕೆಲವು ಕಾರ್ಯಕ್ರಮಗಳ ಬಗ್ಗೆ ವಿವರಿಸುವೆನು.

ಅಲ್ಲಾಹನ ಅನುಗ್ರಹದಿಂದ ಕೆನಡದ ಜಮಾಅತ್ ಸಹ ಲೋಕದ ಬೇರೆ ಅನೇಕ ಜಮಾಅತ್‌ಗಳ ಹಾಗೆ ನಿಷ್ಠೆಯಲ್ಲಿ ಮುಂದೆ ಮುಂದೆ ಸಾಗುವ ಜಮಾಅತ್‌ಗಳಲ್ಲಿ ಸೇರಿದೆ. ವಿಶಿಷ್ಟವಾಗಿ ಪ್ರೆಸ್ ಮತ್ತು ಮೀಡಿಯಾಗಳಿಗೆ ಸಂಬಂಧಿಸಿ ನಮ್ಮ ತರುಣರು ಬಹಳ ಕೆಲಸ ಮಾಡಿದ್ದಾರೆ. ವಿಶಾಲವಾಗಿ ಜಮಾಅತಿನ ಪರಿಚಯ ಜನರಿಗಾಗುವಂತೆ ಪ್ರಯತ್ನಿಸಿದ್ದಾರೆ. ಅಲ್ಲಾಹನು ಅವರ ಪ್ರಯತ್ನಗಳಿಗೆ ಫಲ ನೀಡಿದ್ದಾನೆ. ಅಲ್ಲಾಹನ ವಿಶಿಷ್ಟ ಅನುಗ್ರಹ ಲಭಿಸಿದೆ. ಆ ತರುಣರು ಕೇವಲ ಬೆರಳೊತ್ತಿದ್ದರು; ಅದರಲ್ಲಿ ಅಲ್ಲಾಹನು ಅಪರಿಮಿತವಾದ ಅನುಗ್ರಹ ನೀಡಿದನು. ಆ ತರುಣರು ಸ್ವತಃ ಹೇಳುತ್ತಾರೆ- ನಮ್ಮ ಪ್ರತೀಕ್ಷೆಗಿಂತ ಬಹಳ ಹೆಚ್ಚಿನ ಮಟ್ಟದ ಉತ್ತಮ ಪ್ರತಿಕ್ರಿಯೆ ಲಭಿಸಿದೆ ಎಂದು.

ಅಲ್ಲಾಹನ ಅನುಗ್ರಹದಿಂದ ಕೆನಡದಲ್ಲಿ ಮೂರು ಹೊಸ ಮಸ್‌ಜಿದ್‌ಗಳನ್ನು ನಿರ್ಮಿಸಲಾಗಿದೆ. ಅವುಗಳ ಪೈಕಿ ಎರಡು ಮಸ್‌ಜಿದ್‌ಗಳಿಗೆ ಸಂಬಂಧಿಸಿದ ಕಾರ್ಯಕ್ರಮಗಳಿಗೆ ಅನ್ಯರನ್ನು ಸಹ ಆಮಂತ್ರಿಸಲಾಗಿತ್ತು. ಪಾರ್ಲಿಮೆಂಟಿನಲ್ಲಿ ಸಹ ಒಂದು ಕಾರ್ಯಕ್ರಮವಿತ್ತು. ಯೋರ್ಕ್ ವಿಶ್ವವಿದ್ಯಾಲಯದಲ್ಲೂ ಭಾಷಣ ಮಾಡಿದೆ. ಟೊರೊಂಟೋದಲ್ಲಿ ಪೀಸ್ ಸಿಂಪೋಸಿಯಂ ಜರಗಿಸಲಾಯಿತು. ಕ್ಯಾಲ್‌ಗೆರಿಯಲ್ಲೂ ಪೀಸ್ ಸಿಂಪೋಸಿಯಂ ಇತ್ತು. ಅವುಗಳಲ್ಲಿ ಅನ್ಯರ ಮುಂದೆ ಇಸ್ಲಾಮೀ ಉಪದೇಶಗಳನ್ನು ವಿವರಿಸಲು ಸಂದರ್ಭ ಲಭಿಸಿತು. ಅಲ್ಲಾಹನ ಅನುಗ್ರಹದಿಂದ ಪ್ರತಿಯೊಂದು ಸ್ಥಳದಲ್ಲಿ ಜನರು ಇಸ್ಲಾಮೀ ಉಪದೇಶಗಳ ಸೌಂದರ್ಯವನ್ನು ತಿಳಿದುಕೊಂಡರು. ಮೊದಲು ನಾನು ಟೊರೊಂಟೋದ ಮೀಡಿಯಾ ಕವರೇಜ್ ಬಗ್ಗೆ ಸಂಕ್ಷಿಪ್ತವಾಗಿ ವಿವರಿಸುವೆನು. ಮೀಡಿಯಾದೊಂದಿಗೆ ಅಲ್ಲಿ ಮೂರು ಸಂದರ್ಶನಗಳು ನಡೆಯಿತು. ಅವುಗಳಲ್ಲೊಂದು ಟೊರೊಂಟೋದ ಗ್ಲೋಬಲ್ ನ್ಯೂಸ್‌ನವರದಾಗಿತ್ತು. ಅವರು ಈ ಸಂದರ್ಶನವನ್ನು ಬಿತ್ತರಿಸಿದರು. ಅಂದಾಜು ಮೂರು ಲಕ್ಷ ಜನರು ಅದನ್ನು ವೀಕ್ಷಿಸಿದರು. ಎರಡನೆಯ ಸಂದರ್ಶನ ಸಿ.ಬಿ.ಸಿ.ಯವರದ್ದಾಗಿತ್ತು. ಅದು ಅವರ ನೇಶನಲ್ ನ್ಯೂಸ್ ಚ್ಯಾನಲ್ ಆಗಿದೆ. ಅಂದಾಜು ಅರ್ಧ ಗಂಟೆಯ ಈ ಕಾರ್ಯಕ್ರಮವನ್ನು ನೇಶನಲ್ ಟೆಲಿವಿಶನ್‌ನಲ್ಲಿ ಬಿತ್ತರಿಸಲಾಗಿತ್ತು. ಹತ್ತು ಮಿಲಿಯ ಕೆನಡದ ಜನರಿಗೆ ಅದರ ಸಂದೇಶ ತಲಪಿತು. ಅದೇರೀತಿ ಅಲ್ಲಿನ ಗ್ಲೋಬ್ ಎಂಡ್ ಮೈಲ್ ಎಂಬುದು ಒಂದು ರಾಷ್ಟ್ರೀಯ ಪತ್ರಿಕೆಯಾಗಿದೆ. ಅದರಲ್ಲಿ ಬಹಳ ವಿಸ್ತಾರವಾಗಿ ಸಮಾಚಾರಗಳನ್ನು ಪ್ರಕಟಿಸಲಾಯಿತು. ಅದು ಯೂಟ್ಯೂಬ್ ಚ್ಯಾನಲ್‌ನಲ್ಲೂ ಪ್ರಕಟವಾಯಿತು. ಅದರ ಮೂಲಕ ಒಂದು ಮಿಲಿಯ ಜನರಿಗೆ ಸಮಾಚಾರ ತಲಪಿತು.

ಅನಂತರ, ಎಂದರೆ ಜಲ್ಸದ ನಂತರ ಕೆನಡದ ರಾಜಧಾನಿ ಒಟ್ಟೋವಾದಲ್ಲಿ ಪಾರ್ಲಿಮೆಂಟಿನಲ್ಲಿ ಇಡೀ ದಿನ ವಿವಿಧ ಕಾರ್ಯಕ್ರಮಗಳಿದ್ದುವು. ಅನೇಕ ಜನರನ್ನು ಭೇಟಿ ಮಾಡಲಾಯಿತು. ಅಲ್ಲಿನ ಪ್ರಧಾನ ಮಂತ್ರಿಯವರೊಂದಿಗೆ ಪ್ರತ್ಯೇಕ ಭೇಟಿ ನಡೆಯಿತು. ಅವರ ಕೆಲವು ಮಂತ್ರಿಗಳೊಂದಿಗೆ ಸಹ ಕುಳಿತುಕೊಂಡು ಚರ್ಚೆ ನಡೆಯಿತು. ಇವೆಲ್ಲ ಬಹಳ ಉತ್ತಮ ವಾತಾವರಣದಲ್ಲಿ ಜರಗಿತು. ಅವರ ಸಹಾಯ ಯಾವಾಗಲೂ ಜಮಾಅತ್‌ನೊಂದಿಗೆ ಇತ್ತು. ಅದರ ಬಗ್ಗೆ ನಾನು ಕೃತಜ್ಞತೆ ಸಹ ಅರ್ಪಿಸಿದೆ.

ಅಲ್ಲಿ ಪಾರ್ಲಿಮೆಂಟ್ ಹೌಸಿನ ಒಂದು ಹಾಲ್‌ನಲ್ಲಿ ಒಂದು ಕಾರ್ಯಕ್ರಮವಿತ್ತು. ಆ ಸಭೆಯಲ್ಲಿ ಕೆನಡದ ಆರು ಮಂತ್ರಿಗಳು, ಐವತ್ತೇಳು ಪಾರ್ಲಿಮೆಂಟ್ ಸದಸ್ಯರು, ವಿವಿಧ ದೇಶಗಳ ಹನ್ನೊಂದು ರಾಯಭಾರಿಗಳು, ಅಮೇರಿಕದ ರಾಯಭಾರಿ ಕಚೇರಿಯ ಪ್ರಧಾನ ಕಾರ್ಯದರ್ಶಿ, ಲಿಬಿಯಾದ ರಾಯಭಾರಿ ಕಚೇರಿಯ ಪ್ರತಿನಿಧಿ ಭಾಗವಹಿಸಿದ್ದರು. ಬೇರೆ ಮೂವತ್ತು ಗಣ್ಯರು ಸಹ ಭಾಗವಹಿಸಿದರು. ಅದರಲ್ಲಿ ಅವರ ಚೀಫ್ ಆಫ್ ಸ್ಟಾಫ್ ಮತ್ತು ಸಚಿವರು ಸಹ ಇದ್ದರು. ಎವಾಂಜಲಿಕಲ್ ಫೆಲೋಶಿಪ್‌ನ ಡೈರೆಕ್ಟರ್ ಮತ್ತು ಕೆನಡಿಯನ್ ರೆಡ್‌ಕ್ರಾಸಿನ ಚೀಫ್ ಕಮ್ಯೂನಿಕೇಶನ್ ಆಫೀಸರ್ ಸಹ ಇದ್ದರು. ಆರ್.ಸಿ.ಎಂ.ಪಿ.ಯ ಅಸಿಸ್ಟೆಂಟ್ ಕಮೀಶನರ್ ಇದ್ದರು. ಒಟ್ಟೋವಾ ಯುನಿವರ್ಸಿಟಿ ಮತ್ತು ಕಾರ್ಲ್‌ಟನ್ ಯುನಿವರ್ಸಿಟಿಯ ಪ್ರೊಫೆಸರ್‌ಗಳಿದ್ದರು. ಕೆಲವು ಡೀನ್‌ಗಳೂ ವೈಸ್ ಪ್ರೆಸಿಡೆಂಟರೂ ಇದ್ದರು. ಕೆನಡಿಯನ್ ಕೌನ್ಸಿಲ್ ಫಾರ್ ಮುಸ್ಲಿಮ್ಸ್ ಇದರ ಡೈರೆಕ್ಟರ್ ಸಹ ಇದ್ದರು. ಯು.ಎಸ್. ಸರಕಾರದ ಪ್ರತಿನಿಧಿಗಳೂ ಮತ್ತು ತಿಂಕ್‌ಟ್ಯಾಂಕ್ (THINK TANK)ಗೆ ಸೇರಿದ ಸದಸ್ಯರು ಸೇರಿದ್ದರು. ಒಟ್ಟಿನಲ್ಲಿ, ತಮ್ಮನ್ನು ಲೋಕ ವ್ಯವಹಾರಗಳನ್ನು

ಚಲಾಯಿಸುವವರೆಂದು ಭಾವಿಸುವ ಜನರ ಒಂದು ಗುಂಪು ಅಲ್ಲಿತ್ತು. ಅವರ ಮುಂದೆ ಇಸ್ಲಾಮಿನ ಉಪದೇಶಗಳನ್ನು ವಿವರಿಸಲು ಸಂದರ್ಭ ಲಭಿಸಿತು. ಅವರು ಮಾಡುವ ಕೆಲಸಗಳ ಬಗ್ಗೆ ಮತ್ತು ಅವರ ದ್ವಿಮುಖ ಧೋರಣೆ ಬಗ್ಗೆ ನಾನು ಅವರಿಗೆ ಸ್ಪಷ್ಟವಾಗಿ ಹೇಳಿದೆ. ನಾನು ಹೇಳಿದೆ: ನೀವು ಕೇವಲ ಮುಸ್ಲಿಮರ ಮೇಲೆ ಮಾತ್ರ ದೋಷಾರೋಪ ಮಾಡಬೇಡಿರಿ. ನಿಮ್ಮ ಕೆಲಸ ಸಹ ಹೇಗಿದೆ ಎಂದು ನೀವು ನೋಡಿರಿ ಎಂದೆನು. ನಿಮ್ಮ ಕಾರಣದಿಂದಲೇ ಕೆಲವು ಸಾರಿ ಲೋಕದ ಕೆಲವು ಭಾಗಗಳಲ್ಲಿ ಗಲಭೆ ಗೊಂದಲಗಳಾಗುತ್ತಿವೆ ಎಂದು ಹೇಳಿದೆ. ಈ ಭಾಷಣದ ಬಗ್ಗೆ ದೊರೆತ ಪ್ರತಿಕ್ರಿಯೆ ಏನೆಂದು ವಿವರಿಸುವೆನು.

ಪಾರ್ಲಿಮೆಂಟ್ ಸದಸ್ಯೆ ಜೂಡಿ ಸೀಗ್ರೋ ಹೀಗೆ ಹೇಳಿದರು: ಅಹ್ಮದಿಯಾ ಜಮಾಅತಿನ ಇಮಾಮರ ಭಾಷಣ ಸದುಪದೇಶಗಳಿಂದ ತುಂಬಿತ್ತು. ನಾವು ತೃತೀಯ ಮಹಾ ಯುದ್ಧದಿಂದ ನಮ್ಮನ್ನು ಹೇಗೆ ರಕ್ಷಿಸಿಕೊಳ್ಳಬಹುದು ಎಂಬುದರ ಬಗ್ಗೆ ನೀಡಿದ ಅವರ ಸಂದೇಶವನ್ನು ಲೋಕಕ್ಕೆಲ್ಲಾ ತಲಪಿಸುವ ಆವಶ್ಯಕತೆ ಇದೆ.

ಪಾರ್ಲಿಮೆಂಟಿನ ಇನ್ನೊಬ್ಬ ಸದಸ್ಯ ಕ್ಯೂನ್‌ವಾನ್ ಹೀಗೆ ಹೇಳಿದರು: ಸಂಕ್ಷಿಪ್ತ ಶಬ್ದಗಳಲ್ಲಿ ಅನೇಕ ವಿಷಯಗಳ ಮೇಲೆ ಪ್ರಕಾಶ ಬೀರಲಾಗಿದೆ. ಅಹ್ಮದಿಯಾ ಜಮಾಅತಿನ ಇಮಾಮರು ತಮ್ಮ ಭಾಷಣದಲ್ಲಿ ಪವಿತ್ರ ಖುರ್‌ಆನಿನ ಅನೇಕ ವಚನಗಳನ್ನು ಉಲ್ಲೇಖಿಸಿದ್ದಾರೆ. ಅವುಗಳಿಂದ ನಾನು ಪ್ರಭಾವಿತನಾಗಿದ್ದೇನೆ. ಇಸ್ರಾಯೇಲ್ ದೇಶದ ರಾಯಭಾರಿ ಹೇಳಿದರು: ಇದು ಶಾಂತಿಗೆ ಸಹಾಯಕವಾದ ಸಂದೇಶವಾಗಿದೆ. ಇಂದು ಇಸ್ಲಾಮ್ ಬಗ್ಗೆ ನನ್ನ ಅಭಿಪ್ರಾಯವನ್ನು ಬದಲಾಯಿಸಿದೆ. ಅದರ ಬಗ್ಗೆ ಮೆಚ್ಚುಗೆ ವರ್ಧಿಸಿದೆ. ಈ ಭಾಷಣವನ್ನು ಪ್ರಕಟಿಸಬೇಕು. ಹೆಚ್ಚು ಹೆಚ್ಚು ಜನರಿಗೆ ಅದನ್ನು ತಲಪಿಸಬೇಕು. ಜನರು ಈ ಸಂದೇಶವನ್ನು ಅನುಸರಿಸುವುದಾದರೆ ಲೋಕದ ಅತಿ ಗಂಭೀರವಾದ ಸಮಸ್ಯೆಗಳು ಸಹ ನಿವಾರಣೆಯಾಗುವುವು. ಭಾಷಣದಲ್ಲಿ ಸಹನೆ ಬಗ್ಗೆ ಹೇಳಿದ ವಿಷಯ ನನಗೆ ಬಹಳ ಇಷ್ಟಕರವಾಯಿತು. ಎಲ್ಲ ಜನರ ಹಕ್ಕುಗಳು ಈಡೇರಿಸಬೇಕು. ಮುಸ್ಲಿಮರಾಗಿರಲಿ ಯಹೂದಿಯಾಗಿರಲಿ ಎಲ್ಲರ ಹಕ್ಕುಗಳನ್ನು ಈಡೇರಿಸಬೇಕೆಂಬ ಮಾತು ನನಗೆ ಬಹಳ ಇಷ್ಟವಾಯಿತು ಎಂದು ಹೇಳಿದರು.

ಪಾರ್ಲಿಮೆಂಟ್ ಸದಸ್ಯ ನಿಕೋಲಾ ಡಿ ಓರ್‌ಯೂ ತನ್ನ ಅಭಿಪ್ರಾಯವನ್ನು ಹೀಗೆ ಸೂಚಿಸಿದರು. ಬಹಳ ಉತ್ತಮ ಭಾಷಣವಾಗಿತ್ತು. ಲೋಕದ ಎಲ್ಲ ಸಮಸ್ಯೆಗಳ ಬಗ್ಗೆ ಸಂಕ್ಷಿಪ್ತವಾಗಿ ಪ್ರಸ್ತಾಪಿಸಲಾಗಿದೆ. ನೀವು ಧರ್ಮದ ಹಿನ್ನಲೆಯಲ್ಲಿ ಲೋಕದ ಸಮಸ್ಯೆಗಳ ಬಗ್ಗೆ ಪ್ರಕಾಶ ಬೀರುವಿರಿ. ಅಹ್ಮದಿಯಾ ಜಮಾಅತ್ ಒಂದು ಬಲಿಷ್ಠ ಜಮಾಅತ್ ಆಗಿದೆ. ಅದು ಧಾರ್ಮಿಕ ಸಂಘಟನೆಗಳಿಗೆ ಒಂದು ಮಾದರಿಯಾಗಿದೆ. ಧಾರ್ಮಿಕ ವಿಷಯಗಳಿಗೆ ಸಂಬಂಧಿಸಿ ಸಹನೆ ದೋರುವ ಬಗ್ಗೆ ವಿವರಿಸಲಾಗಿದೆ. ಇದಕ್ಕಿಂತ ಉತ್ತಮ ಭಾಷಣ ನಾನು ಪ್ರಾಯಶಃ ಆಲಿಸಿಲ್ಲ. ಲೋಕ ಎದುರಿಸುತ್ತಿರುವ ಎಲ್ಲ ಪ್ರಶ್ನೆಗಳ ಬಗ್ಗೆ ಬೆಳಕು ಹಾಯಿಸಲಾಗಿದೆ. ಶಾಂತಿಯ ಬಗ್ಗೆ ಮಾತನಾಡುವ ಒಬ್ಬರನ್ನು ಆಲಿಸಲು ಸಾಧ್ಯವಾದ ಕಾರಣ ನನಗೆ ಈ ಕಾರ್ಯಕ್ರಮದಲ್ಲಿ ಭಾಗವಹಿಸಿ ಬಹಳ ಸಂತೋಷವಾಯಿತು ಎಂದು ಹೇಳಿದರು.

ಜರ್ಮನಿಯ ರಾಯಭಾರಿ ವರ್‌ನರ್‌ವೆಂಟ್ ಹೀಗೆ ಹೇಳಿದರು: ಅಹ್ಮದಿಯಾ ಜಮಾಅತಿನ ಇಮಾಮರು ಮುಂದಿನ ಕಾಲದ ಚಿತ್ರಣ ನೀಡಿದ್ದಾರೆ. ನಾವೆಲ್ಲರೂ ಸಹ ಅಂತಹ ಶಾಂತಿಭರಿತ ಭವಿಷ್ಯತ್ ಕಾಲವನ್ನು ಬಯಸುತ್ತೇವೆ. ಇಮಾಮರ ಭಾಷಣದಿಂದ ಇಸ್ಲಾಮ್ ಶಾಂತಿಭರಿತ ಧರ್ಮ ಎಂದು ನಮಗೆ ತಿಳಿಯಿತು. ನಾವೆಲ್ಲರೂ ಯುರೋಪಿಗೆ ಆಗಮಿಸುವವರೊಂದಿಗೆ ಬೆರೆತು ಜೀವಿಸಬಹುದಾಗಿದೆ. ನಾವೆಲ್ಲರೂ ಲೋಕವನ್ನು ಉತ್ತಮ ಪಡಿಸಲು ಪ್ರಯತ್ನಿಸಬೇಕು ಹಾಗೂ ಜನರಿಗೆ ವೈಯ್ಯಕ್ತಿಕವಾಗಿ ಸ್ವಾತಂತ್ರ್ಯದಿಂದ ಜೀವಿಸಲು ಅನುಮತಿ ಲಭಿಸಬೇಕು ಎಂಬುದೇ ಈ ಭಾಷಣದ ಮುಖ್ಯ ಸಂದೇಶವಾಗಿದೆ.

ಪಾರ್ಲಿಮೆಂಟ್ ಹೌಸ್‌ನಲ್ಲಿ ನಡೆದ ಕಾರ್ಯಕ್ರಮದ ಬಗ್ಗೆ ಮೀಡಿಯಾ ಕವರೇಜ್ ಮಾಡಲಾಗಿತ್ತು. ಕೆನಡದ ಪ್ರಧಾನಮಂತ್ರಿ ತನ್ನ ಟ್ವೀಟ್‌ನಲ್ಲಿ ಹೀಗೆ ಬರೆದರು: ಈ ದಿನ ಅಹ್ಮದಿಯಾ ಜಮಾಅತಿನ ಖಲೀಫರಾದ ಮಿರ್ಝಾ ಮಸ್‌ರೂರ್ ಅಹ್ಮದರನ್ನು ಭೇಟಿಯಾಗಿ ಬಹಳ ಸಂತೋಷವಾಯಿತು. ಅವರೊಂದಿಗೆ ಫೋಟೋ ಸಹ ನೀಡಿರುವೆನು. ಅನಂತರ ಟ್ವೀಟ್ ಮುಂದುವರಿಯಿತು. ಪತ್ರಿಕೆಗಳ ಮೂಲಕ ಈ ಕಾರ್ಯಕ್ರಮದ ಸಮಾಚಾರ ಅಂದಾಜು ನಾಲ್ಕುವರೆ ಮಿಲಿಯನ್ ಜನರಿಗೆ ತಲಪಿತು. ಇದೇ ರೀತಿ ಟೊರೊಂಟಾದಲ್ಲಿ ಐವಾನೆ ತಾಹಿರ್‌ನಲ್ಲಿ ಒಂದು ಪೀಸ್ ಸಿಂಪೋಸಿಯಂ ಇತ್ತು. ಅದರಲ್ಲಿ 614 ಅಹ್ಮದಿಯೇತರ ಮುಸ್ಲಿಮರು ಮತ್ತು ಮುಸ್ಲಿಮೇತರರು ಭಾಗವಹಿಸಿದರು. ಅವರಲ್ಲಿ ವಿವಿಧ ನಗರಗಳ ಮೇಯರ್‌ಗಳು, ಕೌನ್ಸಿಲರ್‌ಗಳು, ಪತ್ರಕರ್ತರು, ಡಾಕ್ಟರ್‌ಗಳು, ಪ್ರೊಫೆಸರ್‌ಗಳು, ಟೀಚರ್‌ಗಳು, ವಕಿಲರು ಮತ್ತು ವಿವಿಧ ವಿಭಾಗಗಳಿಗೆ ಸೇರಿದ ಜನರು ಸೇರಿದ್ದರು.

ರೆಸ್‌ಬಿಟೇರಿಯನ್ ಚರ್ಚ್‌ನ ಪಾದರಿ ಹೀಗೆ ಹೇಳಿದರು: ಅಹ್ಮದಿಯಾ ಜಮಾಅತಿನ ಇಮಾಮರ ಭಾಷಣ ಆಲಿಸಿ ನಾನು ಬಹಳ ಪ್ರಭಾವಿತನಾದೆನು. ಈ ಸಂದೇಶ ಶಾಂತಿ, ಪ್ರೀತಿ ಮತ್ತು ಪ್ರತೀಕ್ಷೆಯ ಸಂದೇಶವಾಗಿತ್ತು. ಇದು ವರ್ಣ, ವಂಶ, ಪಶ್ಚಿಮ, ಪೂರ್ವ, ಪ್ರತ್ಯೇಕ ಸಮಯ, ಸ್ಥಳ ಮೊದಲಾದವುಗಳೊಂದಿಗೆ ವಿಶಿಷ್ಟ ಸಂಬಂಧ ಹೊಂದದೆ ಇದ್ದು ಸಮಸ್ತ ಲೋಕಕ್ಕಾಗಿರುವ ಸಂದೇಶವಾಗಿದೆ. ಈ ಭಾಷಣದ ಮಹತ್ವವೇನೆಂದರೆ ಲೋಕದಲ್ಲಿ ಈಗ ಬಹಳ ತಪ್ಪು ಗ್ರಹಿಕೆಗಳು ಮತ್ತು ಭಯಭೀತಿ ಹಬ್ಬಿದೆ. ಆದರೆ ಈ ಭಾಷಣದಲ್ಲಿದ್ದ ಸ್ಪಷ್ಟವಾದ ಸಂದೇಶವೇನೆಂದರೆ ನಮ್ಮ ಮಧ್ಯೆ ಸಹಭಾಗಿಯಾಗಿರುವ ವಿಷಯಗಳು ಹೆಚ್ಚಿಗೆ ಇವೆ. ಭಿನ್ನಾಭಿಪ್ರಾಯಗಳು ಕಡಿಮೆ ಇವೆ. ಇದು ಬಹಳ ದೊಡ್ಡ ಸುವಾರ್ತೆಯಾಗಿದೆ. ಇದನ್ನು ಜನರು ಆಲಿಸುವ ಆವಶ್ಯಕತೆ ಇದೆ ಎಂದು ಹೇಳಿದರು.

ಒಬ್ಬ ಅತಿಥಿ, ಗ್ರೆಗ್ ಕೆನಡಿ ಎಂದು ಅವರ ಹೆಸರು. ಅವರ ಸಹೋದರಿ ಇತ್ತೀಚೆಗೆ ಇಸ್ಲಾಮ್ ಧರ್ಮ

ಸ್ವೀಕರಿಸಿದ್ದರು. ಅವರು ಹೇಳುತ್ತಾರೆ: ನಾನು ನನ್ನ ಸಹೋದರಿಯೊಂದಿಗೆ ಇಲ್ಲಿಗೆ ಬಂದೆನು. ನನ್ನ ಸಹೋದರಿ ಇತ್ತೀಚೆಗೆ ಇಸ್ಲಾಮಿಗೆ ಸೇರಿದ್ದಾರೆ. ಅಹ್ಮದಿಯಾ ಜಮಾಅತಿನ ತತ್ವಗಳು ಹೇಗಿವೆ ಎಂದು ನಾವು ನೋಡಲು ಬಯಸಿದ್ದೆವು. ಅಹ್ಮದಿಯಾ ಜಮಾಅತಿನ ಇಮಾಮರ ಸಂದೇಶವನ್ನು ಆಲಿಸಿ ನನ್ನ ಸಂತೋಷಕ್ಕೆ ಮಿತಿಯಿಲ್ಲ. ಇಷ್ಟು ಪ್ರೀತಿಸುವ, ಇಷ್ಟು ಬೆಂಬಲ ನೀಡುವ ಮತ್ತು ಜನರ ಸೇವೆ ಮಾಡುವ ಜನರೊಂದಿಗೆ ನನ್ನ ಸಹೋದರಿ ಸೇರಿದ್ದಾಳೆಂದು ತಿಳಿಯಿತು. ಇಲ್ಲಿ ನಾನು ಕಲಿತುಕೊಂಡ ವಿಷಯಗಳಿಂದ ನನಗೆ ಅಪಾರ ಸಂತೋಷವಾಗಿದೆ.

ಒಬ್ಬರು ಪಾರ್ಲಿಮೆಂಟ್‌ನಲ್ಲಿ ಜರಗಿದ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಅವರು ನೈಲ್ ಅಸೋಸಿಯೇಶನಿನ ಅಧ್ಯಕ್ಷರಾದ ಮುಹಮ್ಮದುಲ್ ಹಲಾವಾಜಿ ಆಗಿದ್ದಾರೆ. ಅವರು ಹೀಗೆ ಹೇಳಿದರು: ಪಾರ್ಲಿಮೆಂಟ್‌ನಲ್ಲಿ ಅಹ್ಮದಿಯಾ ಜಮಾಅತಿನ ಇಮಾಮರು ಭಾಷಣ ಮಾಡುವುದನ್ನು ಆಲಿಸಿದಾಗ, ಪಾರ್ಲಿಮೆಂಟ್‌ನಲ್ಲಿ ಒಬ್ಬ ಮುಸ್ಲಿಮ್ ನೇತಾರ ಈ ರೀತಿಯ ಭಾಷಣ ಮಾಡಬಹುದೆಂಬ ಬಗ್ಗೆ ನನಗೆ ಆಶ್ಚರ್ಯವಾಯಿತು. ಭಯದ ಯಾವುದೇ ಚಿಹ್ನೆ ಕಾಣಲಿಲ್ಲ. ಅತ್ಯಂತ ನಿರ್ಭಯರಾಗಿ ಇಮಾಮರು ಭಾಷಣ ಮಾಡಿದರು. ಇಸ್ಲಾಮಿನ ಸತ್ಯವಾದ ಸಂದೇಶ ಇದೇ ಆಗಿದೆ ಎಂದು ಜನರಿಗೆ ದೃಢವಾಗಿ ತಿಳಿಯಿತು. ಈಗ ನಡೆಯುತ್ತಿರುವ ಯುದ್ಧಗಳ ಹಿಂದೆ ಕೆಲವು ಸ್ವಾರ್ಥ ಸಾಧಕರು ಸೇರಿಕೊಂಡಿರುವುದು ಅವರ ಲಾಭಕ್ಕೋಸ್ಕರವಾಗಿದೆ.

ಇನ್ನೊಂದು ಕಾರ್ಯಕ್ರಮ ಯೋರ್ಕ್ ವಿಶ್ವವಿದ್ಯಾಲಯದಲ್ಲಿ ಜರಗಿತು. ಯೋರ್ಕ್ ಯುನಿವರ್ಸಿಟಿ ಕೆನಡದ ದೊಡ್ಡ ಯುನಿವರ್ಸಿಟಿಗಳಲ್ಲಿ ಒಂದಾಗಿದೆ. ಈ ವಿಶ್ವವಿದ್ಯಾಲಯದಲ್ಲಿ ಹನ್ನೊಂದು ಫೇಕಲ್‌ಟೀಸ್ ಇವೆ. (ಶಿಕ್ಷಣ ನೀಡುವ ವಿವಿಧ ವಿಭಾಗಗಳು). ಇಲ್ಲಿ ಐವತ್ತಮೂರು ಸಾವಿರಕ್ಕಿಂತ ಹೆಚ್ಚು ವಿದ್ಯಾರ್ಥಿಗಳು ಕಲಿಯುತ್ತಿದ್ದಾರೆ. ಇಲ್ಲಿನ ಅಧ್ಯಾಪಕರ ಸಂಖ್ಯೆ ಏಳು ಸಾವಿರದಷ್ಟಿದೆ. ಈ ಯುನಿವರ್ಸಿಟಿಯಿಂದ ಮೂರು ಲಕ್ಷದಷ್ಟು ವಿದ್ಯಾರ್ಥಿಗಳು ಶಿಕ್ಷಣ ಪೂರೈಸಿದ್ದಾರೆ. ಕೆನಡದ ಮೂರನೆಯ ದೊಡ್ಡ ಯುನಿವರ್ಸಿಟಿ ಇದಾಗಿದೆ. ಒಬ್ಬ ವಿದ್ಯಾರ್ಥಿನಿ ಶೆರಿಲ್ ಕ್ರೇಸ್ ಹೀಗೆ ಹೇಳಿದರು: ಇಸ್ಲಾಮಿನ ವಾಸ್ತವಿಕ ತತ್ವಗಳನ್ನು ಅರಿತುಕೊಳ್ಳಲು ಉತ್ತಮ ಸಂದರ್ಭ ಲಭಿಸಿತು. ಈಗ ನನಗೆ ಇಸ್ಲಾಮ್ ಬಗ್ಗೆ ಸ್ವಲ್ಪ ಮಟ್ಟಿಗೆ ತಿಳಿಯಿತು ಎಂದು ಹೇಳಿದರು.

ಅನಂತರ ಸೆಸ್‌ಕಾಟೂನ್‌ಗೆ ಹೋದೆವು. ಅಲ್ಲಿ ಪ್ರೆಸ್ ಕಾನ್‌ಫರೆನ್ಸ್ ಇತ್ತು. ಜಮಾಅತಿನ ಕಾರ್ಯಕ್ರಮಗಳು ಸಹ ಇದ್ದುವು. ರೇಡಿಯೋ ಮತ್ತು ಪ್ರೆಸ್ ಮೂಲಕ 1.78 ಮಿಲಿಯ ಜನರಿಗೆ ಸಂದೇಶ ತಲಪಿಸಲಾಯಿತು. ಅನಂತರ ರೆಜಾಯಿನಾದ ಮಸ್‌ಜಿದ್ ಮಹ್‌ಮೂದ್ ಉದ್ಘಾಟಿಸಲಾಯಿತು. ಅದಕ್ಕೆ ಸಂಬಂಧಿಸಿ ಒಂದು ಹೋಟೆಲ್‌ನಲ್ಲಿ ಸ್ವಾಗತ ಸಮಾರಂಭವಿತ್ತು. ಅದರಲ್ಲಿ ಇನ್ನೂರು ಅತಿಥಿಗಳು ಸೇರಿದ್ದರು. ಅತಿಥಿಗಳಲ್ಲಿ ಸೆಸ್‌ಕಾಟೂನ್ ಪ್ರಾಂತ್ಯದ ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ, ರೆಜಾಯಿನದ ಮೇಯರ್, ಮಿನಿಸ್ಟರ್ ಫೋರ್ ಪಬ್ಲಿಕ್ ಸೇಫ್ಟಿ, ವಿರೋಧ ಪಕ್ಷದ ಶಾಸನ ಸಭೆಯ ಡೆಪ್ಯೂಟಿ ಲೀಡರ್, ಹತ್ತಿರದ ನಗರಗಳ ಈಗಿನ ಮತ್ತು ಹಿಂದಿನ ಮೇಯರ್‌ಗಳು, ಸೆಸ್‌ಕಾಟೂನ್ ವಿಶ್ವವಿದ್ಯಾಲಯದ ಅಧ್ಯಕ್ಷರು ಮತ್ತು ಉಪಾಧ್ಯಕ್ಷರು, ರೆಜಾಯಿನಾ ವಿಶ್ವವಿದ್ಯಾಲಯದ ರಿಲೀಜಿಯನ್ ಸ್ಟಡೀಸ್ ವಿಭಾಗದ ಹೆಡ್ ಪ್ರೊಫೆಸರ್‌ಗಳು, ಪಾದರಿಗಳು, ಪೋಲೀಸ್ ಚೀಫ್ ಮತ್ತು ವಿವಿಧ ವಿಭಾಗಗಳ ಜನರು ಅತಿಥಿಗಳಾಗಿ ಇದ್ದರು.

ಜಾಗತಿಕ ಧರ್ಮಗಳ ಒಬ್ಬ ಪ್ರೊಫೆಸರ್ ರೆಜಾಯಿನದ ಮಸ್‌ಜಿದ್ ಉದ್ಘಾಟನೆಯ ಭಾಷಣ ಆಲಿಸಿ ಹೇಳಿದರು: ಅತ್ಯಂತ ಜ್ಞಾನಭರಿತ ಆಕರ್ಷಕ ಭಾಷಣವಾಗಿತ್ತು. ಜಾಗತಿಕ ಧರ್ಮಗಳ ಪ್ರೊಫೆಸರ್ ಎಂಬ ನೆಲೆಯಲ್ಲಿ ನಾನು ಆಲಿಸಿದ ಎಲ್ಲ ಭಾಷಣಗಳಿಗಿಂತ ಇದು ಅತ್ಯಂತ ಎದ್ದು ಕಾಣುವಂತಹದಾಗಿದೆ ಎಂದು ಹೇಳಿದರು.

ಸೆಸ್‌ಕಾಟೂನ್‌ನ ವಿರೋಧ ಪಕ್ಷದ ನಾಯಕ ಟ್ರೆಂಟ್ ಒದರ್‌ಸ್ಪೂನ್ ಹೇಳುತ್ತಾರೆ: ಇಂದಿನ ಈ ಸಭೆ ಒಂದು ಸುಂದರವಾದ ಸಭೆಯಾಗಿತ್ತು. ಅಹ್ಮದಿಯಾ ಜಮಾಅತಿನ ಇಮಾಮರ ಸಂದೇಶವು ಬಲಿಷ್ಠವೂ ಆವಶ್ಯಕವಾದ ಸಂದೇಶವೂ ಆಗಿತ್ತು. ನಮ್ಮ ಧರ್ಮಗಳಲ್ಲಿ ಸಹಮತವಿರುವ ವಿಷಯಗಳ ಬಗ್ಗೆ ಪ್ರಸ್ತಾಪಿಸಲಾಗಿದೆ. ನಾವು ನಮಗೆ ಬಯಸುವುದನ್ನು ಅನ್ಯರಿಗೂ ಬಯಸಬೇಕೆಂಬ ಅವರು ನೀಡಿದ ಸಂದೇಶವು ನಮಗೆಲ್ಲರಿಗೂ ಮಹತ್ವಪೂರ್ಣವಾಗಿದೆ. ನಾವು ಪಾಲನೆ ಮಾಡಬೇಕಾದ ಮೌಲ್ಯಗಳ ಬಗ್ಗೆ ಇಮಾಮರು ಸೂಚಿಸಿದ್ದಾರೆ. ಈ ಮೌಲ್ಯಗಳು ನಮ್ಮ ನಗರ ರೆಜಾಯಿನಾವನ್ನು ಬಲಪಡಿಸಲು ಮಾತ್ರವಲ್ಲ, ನಮ್ಮ ಪ್ರಾಂತ್ಯವನ್ನು ಮಾತ್ರವಲ್ಲ, ನಮ್ಮ ದೇಶ ಮತ್ತು ಲೋಕವನ್ನು ಬಲಪಡಿಸಲು ಉಪಯುಕ್ತವಾಗಿವೆ.

ರೆಜಾಯಿನದ ಮಸ್‌ಜಿದ್ ಉದ್ಘಾಟನೆಯ ನಂತರ ಸಮಾಚಾರವನ್ನು ಸಂಪರ್ಕ ಮಾಧ್ಯಮಗಳು ಬಿತ್ತರಿಸಿದುವು. ಪ್ರೆಸ್ ಕಾನ್‌ಫೆರೆನ್ಸ್ ಮಾತ್ರವಲ್ಲ ಟಿ.ವಿ. ರೇಡಿಯೋ ಪತ್ರಿಕೆಗಳ ಆರೇಳು ಪ್ರತಿನಿಧಿಗಳು ಸಂದರ್ಶನ ಮಾಡಿದರು. ಈ ಮಸ್‌ಜಿದ್ ಉದ್ಘಾಟನೆಗೆ ಸಂಬಂಧಿಸಿ 1.97 ಮಿಲಿಯ ಜನರಿಗೆ ಇಸ್ಲಾಮಿನ ಸಂದೇಶ ತಲಪಿತು. ಲಾಯಿಡ್ ಮಿನಿಸ್ಟರ್‌ನಲ್ಲಿ ಮಸ್‌ಜಿದ್ ಬೈತುಲ್ ಅಮಾನ್ ಉದ್ಘಾಟನೆ ಮಾಡಲಾಯಿತು. ಇದು ಒಂದು ಚಿಕ್ಕ ಪಟ್ಟಣವಾಗಿದೆ. 49 ಅಹ್ಮದಿಯೇತರ ಅತಿಥಿಗಳು ಭಾಗವಹಿಸಿದ್ದರು. ಅಲ್ಲಿನ ಸ್ವಾಗತ ಸಮಾರಂಭದಲ್ಲಿ ಸೆಸ್‌ಕಾಟೂನ್ ಅಸೆಂಬ್ಲಿ ಸದಸ್ಯರು, ಮಾಜಿ ಪಾರ್ಲಿಮೆಂಟ್ ಸದಸ್ಯರು, ಹೊಸ ಮೇಯರ್, ಸಮೀಪದ ಪಟ್ಟಣಗಳ ಮೇಯರ್‌ಗಳು, ಡೆಪ್ಯೂಟಿ ಮೇಯರ್‌ಗಳು, ಕೌನ್ಸಿಲರ್‌ಗಳು, ಪ್ರೊಫೆಸರ್‌ಗಳು, ಟೀಚರ್‌ಗಳು, ಪತ್ರಿಕಾ ಪ್ರತಿನಿಧಿಗಳು ಹಾಗೂ ವಿವಿಧ ವಿಭಾಗದ ಜನರು ಭಾಗವಹಿಸಿದರು.

ಜೇಸನ್ ಕೆನ್ನೀ, ಎಮಿಗ್ರೇಶನ್ ಎಂಡ್ ಡಿಫೆನ್ಸ್‌ನ ಮಾಜಿ ಸಚಿವರಾಗಿದ್ದರು. ಅವರೊಂದಿಗೆ ನಮ್ಮ ಜಮಾಅತ್

ದೀರ್ಘಕಾಲದ ಸಂಬಂಧ ಹೊಂದಿದೆ. ನನ್ನೊಂದಿಗೆ ವೈಯ್ಯಕ್ತಿಕ ಸಂಬಂಧ ಸಹ ಇದೆ. ಅವರು ಹೇಳುತ್ತಾರೆ: ಅಹ್ಮದಿಯಾ ಜಮಾಅತ್ ಚಿಕ್ಕದಾಗಿದ್ದರೂ ಬಹಳ ಹೆಚ್ಚು ಕೆಲಸ ಮಾಡುತ್ತಿದೆ. ಇಸ್ಲಾಮಿನ ಪ್ರಕಾಶಮಾನವಾದ ವದನವನ್ನು ಲೋಕದ ಮುಂದೆ ಇರಿಸುತ್ತದೆ. ಇಸ್ಲಾಮ್ ಮತ್ತು ಮಸ್‌ಜಿದ್ ಬಗ್ಗೆ ಜನರಲ್ಲಿದ್ದ ನಕಾರಾತ್ಮಕ ಭಾವನೆಗಳನ್ನು ಹೋಗಲಾಡಿಸಲು ತಕ್ಕುದಾದ ಭಾಷಣವನ್ನು ಇಂದು ಇಮಾಮರು ನೀಡಿದ್ದಾರೆ.

ಒಬ್ಬ ಅತಿಥಿ ಜಾನ್ ಗೋರ್ಮಿಲೆ ಹೇಳುತ್ತಾರೆ: ಯಾವುದಾದರೂ ಭಯೋತ್ಪಾದಕ ಘಟನೆ ನಡೆದಾಗ ಅಹ್ಮದಿಯಾ ಜಮಾಅತ್ ಎಲ್ಲರಿಗಿಂತ ಮೊದಲು ವಿವಿಧ ಧರ್ಮಗಳ ಜನರ ಮಧ್ಯೆ ಸಂಬಂಧ ಸ್ಥಾಪಿಸಲು ಮತ್ತು ಒಗ್ಗೂಡಿಸಲು ಪ್ರಯತ್ನ ಮಾಡುತ್ತದೆ. ದೇಶಪ್ರೇಮ ವಿಶ್ವಾಸದ ಒಂದು ಭಾಗ ಎಂದೂ ಅದು ಇಸ್ಲಾಮಿನ ಉಪದೇಶ ಎಂದೂ ಅಹ್ಮದಿಯಾ ಜಮಾಅತಿನ ಇಮಾಮರು ಹೇಳಿದ್ದಾರೆ.

ನವೆಂಬರ್ ದಿನಾಂಕ 11ರ ಜುಮುಅದ ನಂತರ ಪೀಸ್ ಸಿಂಪೋಸಿಯಂ ಜರಗಿಸಲಾಗಿತ್ತು. ಅದರಲ್ಲಿ 644 ಅತಿಥಿಗಳು ಭಾಗವಹಿಸಿದರು. ಅವರಲ್ಲಿ ಇತ್ತೀಚೆಗೆ ಪದವಿಯಿಂದ ಹೊರಹೋದ ಮಾಜಿ ಪ್ರಧಾನಮಂತ್ರಿ, ಹಾಗೂ ಈಗಿನ ಪ್ರಧಾನಮಂತ್ರಿ ಸಹ ಇದ್ದರು. ಅಲ್‌ಬರ್ಟಾದ ಒಬ್ಬ ಸಚಿವ, ಕ್ಯಾಲ್‌ಗರಿಯ ಮಾಜಿ ಮತ್ತು ಈಗಿನ ಮೇಯರ್‌ಗಳು, ಮಾಜಿ ಸಚಿವ ಜೇಸನ್ ಕೆನ್ನೆ, ಕ್ಯಾಲ್‌ಗರಿ ಯುನಿವರ್ಸಿಟಿಯ ಡೀನ್ ಮತ್ತು ವೈಸ್ ಚಾನ್ಸಿಲರ್ ಆಗಮಿಸಿದ್ದರು. ಸಮೀಪ ನಗರಗಳ ಮೇಯರ್, ಡೆಪ್ಯೂಟಿ ಮೇಯರ್‌ಗಳು ಆಗಮಿಸಿದ್ದರು. ರೆಡ್‌ಡೀರ್ ಕಾಲೇಜಿನ ಪ್ರಸಿಡೆಂಟ್, ಶಾಸನ ಸಭೆಯ ಸದಸ್ಯರು ಹಾಗೂ ವಿವಿಧ ವಿಭಾಗದ ಜನರು ಆಗಮಿಸಿದ್ದರು.

ಕೆನಡದ ಮಾಜಿ ಪ್ರಧಾನಮಂತ್ರಿ ಸ್ಟೀಫನ್ ಹಾರ್ಪರ್ ಹೀಗೆ ಹೇಳಿದರು: ಅಹ್ಮದಿಯಾ ಜಮಾಅತಿನ ಇಮಾಮರ ಭಾಷಣಗಳನ್ನು ನಾನು ವಿವಿಧ ಸಂದರ್ಭಗಳಲ್ಲಿ ಆಲಿಸಿದ್ದೇನೆ. ಅವರು ಯಾವಾಗಲೂ ಇಸ್ಲಾಮಿನ ಶಾಂತಿದಾಯಕ ಸಂದೇಶವನ್ನು ಲೋಕಕ್ಕೆ ತಲಪಿಸುತ್ತಿದ್ದಾರೆ. ಇದೊಂದು ವೈಭವಶಾಲಿ ಸಂದೇಶವಾಗಿದೆ. ಅದು ಈ ಜಮಾಅತಿನ ಎಲ್ಲ ಸದಸ್ಯರ ಪ್ರತಿಬಿಂಬವೂ ಆಗಿದೆ. ಅಹ್ಮದಿಯಾ ಜಮಾಅತಿನ ಇಮಾಮರ ಪ್ರತಿಪಾದನೆಗಳು ಬಹಳ ಮುಖ್ಯವಾಗಿವೆ. ಬಹಳ ಆವಶ್ಯಕವೂ ಆಗಿವೆ. ಪ್ರತಿಯೊಬ್ಬನೂ ಅವುಗಳನ್ನು ಆಲಿಸಬೇಕಾಗಿದೆ. ಖಲೀಫತುಲ್ ಮಸೀಹ್ ಹೇಳಿದ್ದಾರೆ ಇಸ್ಲಾಮ್ ಎಂದರೆ ಶಾಂತಿ ಎಂದು. ಇಸ್ಲಾಮ್ ಎಂದರೆ ಅಲ್ಲಾಹನೊಂದಿಗೆ ಮತ್ತು ಅವನ ಸೃಷ್ಟಿಗಳೊಂದಿಗೆ ಪ್ರೀತಿ ಎಂದು ಹೇಳಿದ್ದಾರೆ. ಅಹ್ಮದಿಯಾ ಜಮಾಅತಿನ ಇಮಾಮರು ಎಲ್ಲ ಸಮಸ್ಯೆಗಳ ಬಗ್ಗೆ ಮತ್ತು ವಿಶಿಷ್ಟವಾಗಿ ಮಧ್ಯಪೂರ್ವ ದೇಶಗಳಿಗೆ ಸಂಬಂಧಿಸಿ ಅತ್ಯಂತ ಸುಜ್ಞಾನ ಭರಿತ ಪ್ರಕಾಶ ಬೀರಿದ್ದಾರೆ. ಅಹ್ಮದಿಯಾ ಇಮಾಮರ ಭಾಷಣ ಆಲಿಸದವರೊಂದಿಗೆ ನಾನು ಒತ್ತಾಯ ಪೂರ್ವಕವಾಗಿ ಹೇಳಲು ಬಯಸುವುದೇನೆಂದರೆ ಅವರು ಖಂಡಿತವಾಗಿಯೂ ಈ ಭಾಷಣವನ್ನು ಆಲಿಸಬೇಕು ಎಂದು.

ಕೇಲೆ ಎಂಬ ಒಬ್ಬ ಮಹಿಳೆ ಹೇಳಿದರು: ಇಷ್ಟು ಮಹತ್ವಪೂರ್ಣವಾದ ಕಾರ್ಯಕ್ರಮದಲ್ಲಿ ಭಾಗವಹಿಸಲು ಹೋಗುತ್ತಿದ್ದೇನೆ ಎಂದು ನಾನು ಯೋಚಿಸಿರಲಿಲ್ಲ. ನಾನು ನನ್ನ ಒಬ್ಬ ಸ್ನೇಹಿತೆಯನ್ನು ಸಂತೋಷಪಡಿಸಲು ಇಲ್ಲಿಗೆ ಆಗಮಿಸಿದ್ದೆ. ನಾನು ಬರಲೇಬೇಕೆಂದು ಆಕೆ ಒತ್ತಾಯ ಮಾಡಿದ್ದರು. ಆದರೆ ನಾನು ಇಲ್ಲಿಗೆ ಬಂದು ನನಗೆ ಬಹಳ ಸಂತೋಷವಾಯಿತು. ಇಂತಹ ಕಾರ್ಯಕ್ರಮ ನಾನು ಎಂದೂ ಕಂಡಿಲ್ಲ. ಇಲ್ಲಿ ಎಲ್ಲ ಕಡೆ ಗುಣಾತ್ಮಕ ಚಿಂತನೆಗಳಿವೆ. ಅಹ್ಮದಿಯಾ ಇಮಾಮರ ಸಂದೇಶ ಬಹಳ ಉನ್ನತವಾಗಿತ್ತು. ನನ್ನಂತಹ ಕಡಿಮೆ ಜ್ಞಾನ ಹೊಂದಿದವಳಿಗೆ ಸ್ಪಷ್ಟವಾಯಿತು, ಇಸ್ಲಾಮ್ ಎಲ್ಲ ಜನಾಂಗಗಳಿಗೂ ಎಲ್ಲ ವರ್ಗದವರಿಗೂ ಧರ್ಮದವರಿಗೂ ಅಭಿವಂದನೆ ನೀಡುತ್ತದೆ ಎಂದು. ನಾವು ಇಸ್ಲಾಮ್ ಬಗ್ಗೆ ಹೆದರುವ ಆವಶ್ಯಕತೆ ಇಲ್ಲ. ಬದಲಾಗಿ ನಾವು ಮುಸ್ಲಿಮರ ಬಗ್ಗೆ ಚೆನ್ನಾಗಿ ಅರಿತುಕೊಳ್ಳುವ ಆವಶ್ಯಕತೆ ಇದೆ ಎಂದು ಹೇಳಿದರು.

ಕ್ಯಾಲ್‌ಗರಿಯ ಇಂಟರ್‌ವ್ಯೂ ಮತ್ತು ಪ್ರೆಸ್ ಕಾನ್‌ಫರೆನ್ಸ್ ಮೊದಲಾದವುಗಳ ಮೂಲಕ ಐದು ಮಿಲಿಯ ಜನರಿಗೆ ಸಂದೇಶ ತಲಪಿತು. ಕೆನಡದ ನನ್ನ ಪ್ರವಾಸದ ಕಾಲದಲ್ಲಿ 32ಟಿ.ವಿ ಚ್ಯಾನಲ್‌ಗಳು ಐದು ಭಾಷೆಗಳಲ್ಲಿ ಸಮಾಚಾರ ನೀಡಿದುವು. ಅವುಗಳ ಮೂಲಕ ಒಟ್ಟು 40 ಮಿಲಿಯ ಜನರಿಗೆ ಸಂದೇಶ ತಲಪಿತು. ವಿವಿಧ ರೇಡಿಯೋ ಸ್ಟೇಶನ್‌ಗಳು ಆರು ಭಾಷೆಗಳಲ್ಲಿ ಮೂವತ್ತು ಸಮಾಚಾರಗಳನ್ನು ಬಿತ್ತರಿಸಿದುವು. ಅವುಗಳ ಮೂಲಕ 8 ಲಕ್ಷ ಜನರಿಗೆ ಸಂದೇಶ ತಲಪಿತು. 227 ಪತ್ರಿಕೆಗಳಲ್ಲಿ ಹನ್ನೆರಡು ವಿವಿಧ ಭಾಷೆಗಳಲ್ಲಿ ಸಮಾಚಾರಗಳು ಮತ್ತು ಇಂಟರ್‌ವ್ಯೂಗಳು ಪ್ರಕಟವಾದುವು. ಅವುಗಳ ಮೂಲಕ 4.8 ಮಿಲಿಯ ಜನರಿಗೆ ಸಂದೇಶ ತಲಪಿತು. ಒಟ್ಟಾರೆ 60 ಮಿಲಿಯ ಜನರಿಗೆ ಸಂದೇಶ ತಲಪಿಸಿದಂತಾಯಿತು – ಅಲ್‌ಹಂದುಲಿಲ್ಲಾಹ್.

ಇವೆಲ್ಲಾ ಅಲ್ಲಾಹನ ಅನುಗ್ರಹಗಳಾಗಿವೆ. ಇದರ ಬಗ್ಗೆ ನಾವು ಗಮನಿಸಿ ಅವುಗಳನ್ನು ಕಾಪಾಡಬೇಕಾಗಿದೆ. ವಿಶಿಷ್ಟವಾಗಿ ಕೆನಡದ ಅಹ್ಮದಿಯರು ಇದರ ಕಡೆಗೆ ವಿಶಿಷ್ಟ ಗಮನ ಹರಿಸಬೇಕು. ಆ ಮೂಲಕ ಅಲ್ಲಾಹನ ಅನುಗ್ರಹಗಳು ಇನ್ನಷ್ಟು ವರ್ಧಿಸುವಂತೆ ಆಗಬೇಕು. ನಾವು ಯಾವಾಗಲೂ ನೆನಪಿಡಬೇಕಾದುದೇನೆಂದರೆ ನಮ್ಮ ಪ್ರತಿಯೊಂದು ಕೆಲಸದಲ್ಲಿ ಅಹ್ಮದಿಯ್ಯತ್ ಮತ್ತು ನೈಜ ಇಸ್ಲಾಮಿನ ಸಂದೇಶ ತಲಪಿಸುವ ಸಂಕಲ್ಪವಿರಬೇಕು. ಲೋಕದಲ್ಲಿ ಏಕದೇವ ವಿಶ್ವಾಸವನ್ನು ಸ್ಥಾಪಿಸುವ ಸಂಕಲ್ಪವಿರಬೇಕು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಪತಾಕೆಯನ್ನು ಲೋಕದಲ್ಲಿ ಹಾರಿಸುವ ಸಂಕಲ್ಪವಿರಬೇಕು. ಹೀಗೆ ಮಾಡಿದರೆ ಅಲ್ಲಾಹನು ನಮ್ಮ ಕೆಲಸಗಳಲ್ಲಿ ಅನುಗ್ರಹ ನೀಡುವನು. ಅಲ್ಲಾಹನು ನಮಗೆ ಹೀಗೆ ಮಾಡುವ ಭಾಗ್ಯ ನೀಡಲಿ. ನಾನು ಕೆನಡದ ಪೀಸ್ ವಿಲೇಜಿನ ಅಹ್ಮದಿಯರೊಂದಿಗೆ ಹೇಳಲು ಬಯಸುತ್ತೇನೆ, ಅಲ್ಲಿ ಅಹ್ಮದಿ ಪರಿಸರವನ್ನು ಸ್ಥಾಪಿಸಿರಿ. ನೀವು ನೈಜ ಇಸ್ಲಾಮಿನ ಮಾದರಿಯನ್ನು ಅಲ್ಲಿ ತೋರಿಸುವವರಾಗಿ ಮುಂದುವರಿಯಿರಿ. ನಾನು ಅಲ್ಲಿದ್ದಾಗ

ಯಾವರೀತಿ ನೀವು ಖಿಲಾಫತ್‌ನೊಂದಿಗೆ ಸ್ನೇಹ ಪ್ರಕಟಿಸಿದ್ದೀರೋ ಅದನ್ನು ಮುಂದುವರಿಸಿರಿ. ನಾವು ಅಲ್ಲಾಹನೊಂದಿಗೆ ಸಂಬಂಧವನ್ನು ಸ್ಥಾಪಿಸಬೇಕು ಮತ್ತು ಅವನನ್ನು ಆರಾಧಿಸಬೇಕು ಎಂಬ ನಮ್ಮ ಮೂಲ ಉದ್ದೇಶವನ್ನು ಎಂದೂ ನಾವು ಮರೆತು ಬಿಡಬಾರದು. ಉದಾಸೀನರಾಗಬಾರದು. ಅಲ್ಲಾಹನು ಅವರಿಗೂ ನಿಮಗೂ ನನಗೂ ಹೀಗೆ ಮಾಡುವ ಭಾಗ್ಯ ದಯಪಾಲಿಸಲಿ – ಆಮೀನ್.

*****

***Friday Sermon delivered by Hadrath Khaleefatul Masih Al Khamis*** *(atba)*

*At, Masjid Baithul Futhuh, London on 18-11-2016.*

**Summarized by** *Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** M.P Ibrahim | ***Typing:*** U Basheer Ahmad

***Published By:*** Kannada Isha'at Team for Nazarath Nashr-O-Isha'ath, Qadian

***Email***: *khutuba.kannada@gmail.com*

**You can find all the Sermons archived at**: www.alislam.org/friday-sermon